# Press Clipping

The Resource Centre

**Publication** : Kannada Prabha

**Date** : May 20, 2016

**Edition** : State

**Page** : 2

ಕನ್ನಡಪ್ರಭ

# ಭಾವಾನಾತ್ಮಕ ಉತ್ತರ !

ತುಂಬಾ ದಿನಗಳೇ ಆಗಿದ್ದವು. ನಿರ್ದೇಶಕ ಅಪೂರ್ವ ಕಾಸರವಳ್ಳಿ ಮತ್ತವರ ತಂಡದ ಸುಳಿವಿರಲಿಲ್ಲ. ಹೀಗಾಗಿ ಆ ದಿನ ಅವರ ತಂಡದ ಸದಸ್ಯರೆಲ್ಲ ಮಾಧ್ಯಮದವರನ್ನು ಭೇಟಿ ಮಾಡಿದ್ದಾಗ, ಮಾತೇ ಇರಲಿಲ್ಲ. ನಟಿ ಭಾವನಾ ಮದುವೆ ಮನೆಯ ಹಾಗೆ ಅಲ್ಲಿ ಓಡಾಡಿಕೊಂಡಿದ್ದರು. ಬಹುದಿನಗಳ ನಂತರ ಮಾಧ್ಯಮದವರಿಗೆ ನಟಿ ಐಂದ್ರಿತಾರ ದರ್ಶನ ಆಗಿತ್ತು. ಸ್ಯಾಂಡ್‌ಲ್‌ವುಡ್‌ನಿಂದ ಬಾಲಿವುಡ್ ಕಡೆ ಮುಖ ಮಾಡಿರುವ ನಟ ಕಿರಣ್ ಶ್ರೀನಿವಾಸ್ ಬಂದಿದ್ದರು. ಇಷ್ಟಾಗಿಯೂ ವೇದಿಕೆಯ ಹಿಂಭಾಗದಲ್ಲಿದ್ದ ಬಿಳಿ ಪರದೆ ಮೇಲೆ 'ನಿರುತ್ತರ' ಎಂಬ ಅಕ್ಷರಗಳು ರಾಚುತ್ತಿದ್ದವು. ಇದೇನು ಇಲ್ಲೂ 'ನಿರುತ್ತರ'ವೇ? ಮಾಧ್ಯಮದವರ ಮುಂದೆ ದೊಡ್ಡದೊಂದು ಪ್ರಶ್ನೆ ಇತ್ತು. ಆ ಕ್ಷಣಕ್ಕೆ ಮೌನ ಮುರಿದು ಗಣ್ಯರನ್ನು ಸ್ವಾಗತಿಸಿ, ಮಾತಿನ ಮಂಟಪಕ್ಕೆ ನಾಂದಿ ಹಾಡಿದರು ನಟಿ ಭಾವನಾ. ಅರವಿಂದ್ ನಿರ್ಮಾಣದಲ್ಲಿ ಕಾಸರವಳ್ಳಿ ಪುತ್ರ, ಅಪೂರ್ವ ಕಾಸರವಳ್ಳಿ ನಿರ್ದೇಶನದ ಮೊದಲ ಚಿತ್ರ 'ನಿರುತ್ತರ' ದ



ಕಿರಣ್ ಶ್ರೀನಿವಾಸ್, ಐಂದ್ರಿತಾ ರೇ

ಪತ್ರಿಕಾಗೋಷ್ಠಿ ಅದು. ತುಂಬಾ ದಿನಗಳ ನಂತರ ಚಿತ್ರ ತಂಡ ಮಾಧ್ಯಮದವರನ್ನು ಭೇಟಿ ಮಾಡಿತ್ತು. ಯಾಕೆಂದ್ರೆ 'ನಿರುತ್ತರ 'ಈಗ ಚಿತ್ರೀಕರಣ ಮುಗಿಸಿದೆ. ಮನಾಲಿ, ಹಿಮಾಚಲ ಪ್ರದೇಶ, ಗೋವಾ ಹಾಗೂ ರಾಜಸ್ಥಾನ ಸುತ್ತಾಟ ನಡೆಸಿದೆ.

ಮೇ 18ಕ್ಕೆ ಚಿತ್ರದ ಹಾಡುಗಳ ಆಡಿಯೋ ಸೀಡಿ ಬಿಡುಗಡೆ ಆಗುತ್ತಿದೆ. ಈ ಕುರಿತು ಮೊದಲ ಮಾತು ನಿರ್ದೇಶಕ ಅಪೂರ್ವ ಅವರದ್ದು. ಇದು ನನ್ನ ವೃತ್ತಿ ಬದುಕಿನ ಮೊದಲ ಚಿತ್ರ. ಉತ್ತಮ ಸಿನಿಮಾದ ಮೊಲಕ ನಿರ್ದೇಶಕನಾದೆ ಎನ್ನುವ ತೃಪ್ತಿಯಿದೆ' ಎಂದರು. ಹೆಚ್ಚೇನು ಹೇಳುವುದೋ ಅರ್ಥವಾಗುತ್ತಿಲ್ಲ ಎಂದಾಗ ಅವವರ ಕೈಯಲ್ಲಿದ್ದ ಮೈಕ್ ನಟ ಕಿರಣ್ ಅವರ ಬಳಿ ಬಂತು. ಯಾಕೆಂದ್ರೆ 'ನಿರುತ್ತರ' ನಾಯಕರಲ್ಲಿ ಅವರು ಒಬ್ಬರು. ಇದೊಂದು ಉತ್ತಮ ಚಿತ್ರ. ಯಶಸ್ಸು ಸ್ಟಾರ್ ಪಟ್ಟ ತಂದುಕೊಡುವ ಚಿತ್ರಗಳು ಖುಷಿ ಕೊಡುತ್ತವೆ. ಆದ್ರೆ ನಿರುತ್ತರ ದಂತಹ ಚಿತ್ರಗಳು ಆತ್ಮತೃಪ್ತಿ ನೀಡುತ್ತವೆ' ಎನ್ನುವುದು ಅವರ ಬಣ್ಣನೆ. ಸಿನಿಮಾದ ಪಾತ್ರಕ್ಕೂ ನನ್ನ ವ್ಯಕ್ತಿತ್ವಕ್ಕೂ ಸಾಕಷ್ಟು ಹೋಲಿಕೆಗಳಿರೋದ್ರಿಂದ ಈ ಪಾತ್ರ ತುಂಬಾನೆ ಇಷ್ಟವಾಯಿತು' ಎಂದಿದ್ದು ನಾಯಕಿ ಐಂದ್ರಿತಾ. 'ಸ್ವಾತಿ ಮುತ್ಯಂ', 'ಶಂಕರಾಭರಣ' ಹಾಗೂ ಮಲಯ ಮಾರುತ ಚಿತ್ರಗಳಿಗೆ ಹಾಗೆ ಇದು ಕೂಡ ಒಳ್ಳೆಯ ಸಂಗೀತ ಪ್ರಧಾನ ಚಿತ್ರವಾಗುತ್ತೆ ' ಎಂದರು ನಟಿ ಭಾವನಾ. ಗೀತೆ ರಚನೆಕಾರ ಕವಿರಾಜ್,ಗೀತೆಗಳ ಬಗ್ಗೆ ಮಾತನಾಡಿದರು. ಶುದ್ಧವಾದ ಸಾಹಿತ್ಯವನ್ನು ನೀಡಿದ್ದೇನ್ನುವ ಖುಷಿಯಿದೆ ಎಂದರು. ಅರವಿಂದ್ ರಾಮಣ್ಣ ನಿರ್ಮಾಣದ ಈ ಚಿತ್ರಕ್ಕೆ ,ನೀಲಾದ್ರಿ ಕುಮಾರ್ ಸಂಗೀತ ನೀಡಿದ್ದಾರೆ. ರಸುಲ್ ಕುಟ್ಟಿ ಹಿನ್ನೆಲೆ ಸಂಗೀತವಿದೆ.